**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**P.C. No.316/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ತಿಪ್ಪೇಶಪ್ಪ @ ತಿಪ್ಪೇಶ್ವರ ಬೀರಣ್ಣನವರ | ***C.W*-1** |
| ತಂದೆಯ ಹೆಸರು | - | ಮರಿಯಪ್ಪ | |
| ವಯಸ್ಸು | - | 69 ವರ್ಷ | |
| ಉದ್ಯೋಗ | - | ನಿವೃತ್ತ ಶಿಕ್ಷಕ, | |
| ವಾಸ: | - | ಕುಪ್ಪೆಲೂರು, ತಾಃರಾಣೇಬೆನ್ನೂರು. | |

**ದಿನಾಂಕಃ 02-12-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**:ಸತ್ಯ ಪ್ರತಿಜ್ಞೆಯ ಮೇರೆಗೆ ಸಾಕ್ಷಿಯ ಹೇಳಿಕೆ:**

ನಾನು ಕುಪ್ಪೆಲೂರಿನ ಖಾಯಂ ನಿವಾಸಿಯಾಗಿರುತ್ತೇನೆ. ಆರೋಪಿತರು ನನಗೆ ಸಂಬಂಧಿಕರಾಗಿರುವುದಿಲ್ಲ ಮತ್ತು ನನಗೆ ಅವರ ಪರಿಚಯ ಇರುವುದಿಲ್ಲ. ಆರೋಪಿತರು ವಕೀಲರ ಮೂಲಕ ನೋಟಿಸ್ ಕೊಟ್ಟ ನಂತರವೇ ನನಗೆ ಅವರ ಬಗ್ಗೆ ಗೊತ್ತಾಗಿರುತ್ತದೆ. ದಿಃ 03-07-2023 ರಂದು ನಾನು ನನ್ನ ಹೆಂಡತಿಯನ್ನು ಬೆಂಗಳೂರಿಗೆ ಕಳುಹಿಸುವುದಕ್ಕಾಗಿ ಮೋಟಾರ್ ಸೈಕಲ್ ನಲ್ಲಿ ರಾಣೇಬೆನ್ನೂರಿನ ರೈಲ್ವೆ ಸ್ಟೇಶನ್ ಗೆ ಬಂದಿದ್ದೇನು. ನನ್ನ ಮಕ್ಕಳಿಗೆ ಹಣದ ಸಹಾಯ ಮಾಡುವುದಕ್ಕಾಗಿ ಎರಡು ಚೆಕ್ ಗಳಿಗೆ ಸಹಿ ಮಾಡಿ ನನ್ನ ಹೆಂಡತಿಗೆ ಕೊಡುವುದಕ್ಕಾಗಿ ನನ್ನ ಜೇಬಿನಲ್ಲಿ ಇಟ್ಟು ಕೊಂಡಿದ್ದೇನು. ಅವುಗಳಲ್ಲಿ ಯಾವುದೇ ಹೆಸರು ಮತ್ತು ದಿನಾಂಕ ಬರೆದಿರಲಿಲ್ಲ. ಮಧ್ಯಾಹ್ನ 2.45 ರಿಂದ 3.25 ರ ಸುಮಾರಿಗೆ ಚೆಕ್ ಗಳನ್ನು ನನ್ನ ಹೆಂಡತಿಗೆ ಕೊಡಲು ಹುಡುಕಾಡಿದಾಗ ಚೆಕ್ ಗಳು ನನ್ನ ಜೇಬಿನಲ್ಲಿ ಇರಲಿಲ್ಲ, ನಾನು ಸಂಜೆಯವರೆಗೂ ಹುಡಿಕಿದರೂ ಸಹ ಅವು ನನಗೆ ಸಿಕ್ಕಿರಲಿಲ್ಲ.

ದಿಃ 04-07-2023 ರಂದು ಮಾರನೇ ದಿನ ರಾಣೇಬೆನ್ನೂರಿನ ಕೆನರಾ ಬ್ಯಾಂಕ್ ಗೆ ಕಳೆದು ಹೋದ ಚೆಕ್ ಗಳ ಬಾಬ್ತು ಸ್ಟಾಪ್ ಪೇಮೆಂಟ್ ಇಂಟಿಮೇಶನ್ ಕೊಟ್ಟಿರುತ್ತೇನೆ. ಚೆಕ್ ಕಳೆದು ಹೋದ ಬಗ್ಗೆ ನಾನು ರಾಣೆಬೆನ್ನೂರ ಶಹರ ಪೊಲೀಸ ಠಾಣೆಗೆ ದೂರು ಕೊಡಲು ಹೋಗಿದ್ದು ಅವರು ನನ್ನ ದೂರನ್ನು ಸ್ವೀಕರಿಸಿರುವುದಿಲ್ಲ. ತದನಂತರ ನಾನು Online ಮೂಲಕ ಸ್ಟಾಪ್ ಪೇಮೆಂಟ್ ಇಂಟಿಮೇಶನ್ ನ್ನು ಇಟ್ಟು Karnataka State Police App ನ ಮೂಲಕ ದೂರನ್ನು ದಾಖಲಿಸಿರುತ್ತೇನೆ.

ತದನಂತರದಲ್ಲಿ ಸುಮಾರು 12/13 ದಿನಗಳ ನಂತರ ಆರೋಪಿತರು ನನ್ನ ಕಳೆದು ಹೋದ ಚೆಕ್ ಗಳನ್ನು ಕೆನರಾ ಬ್ಯಾಂಕ್ ಗೆ ನಗದೀಕರಣಕ್ಕಾಗಿ ಹಾಜರು ಪಡಿಸಿದ್ದರು. 1 ನೇ ಆರೋಪಿ ದಿಃ 17-07-2023 ರಂದು State Bank of India, Ranebennur Branch ಮೂಲಕ ನಗರದೀಕರಣಕ್ಕಾಗಿ ಚೆಕ್ ನಂ.661656 ನ್ನು ರೂ.6,00,000/- ಗಳಿಗೆ ಹಾಜರು ಪಡಿಸಿರುತ್ತಾನೆ. ಅದೇ ರೀತಿ 2 ನೇ ಆರೋಪಿಯು ಸಹ ಚೆಕ್ ನಂ.661657 ನ್ನು ರೂ.6,00,000/- ಗಳ ನಗದೀಕರಣಕ್ಕಾಗಿ ಆ್ಯಕ್ಸಿಸ್ ಬ್ಯಾಂಕ್ ರಾಣೇಬೆನ್ನೂರು ಮೂಲಕ ಹಾಜರು ಪಡಿಸಿರುತ್ತಾನೆ. ಸದರಿ ಚೆಕ್ ನ್ನು ಹಾಜರು ಪಡಿಸಿದಾಗ ನನ್ನ ಬ್ಯಾಂಕ್ ನಿಂದ ನನ್ನ ಮೊಬೈಲ್ ಗೆ ಮೇಸೆಜ್ ಬಂದಿರುತ್ತದೆ. ಆಗ ನಾನು ಬ್ಯಾಂಕ್ ಮ್ಯಾನೇಜರ್ ನ್ನು ಸಂಪರ್ಕಿಸಿದಾಗ 1 ನೇ ಆರೋಪಿ ನೀಡಿದ ಚೆಕ್ Cheque destroyed ಎಂದು ಹಿಂಬರ ಕೊಟ್ಟಿರುವುದು ನನಗೆ ಗೊತ್ತಾಗಿರುತ್ತದೆ. 2 ನೇ ಆರೋಪಿ ಹಾಜರು ಪಡಿಸಿದ ಚೆಕ್ ದಿಃ 28-07-2023 ರಂದು Cheque Refused ಎಂದು ಕೆನರಾ

ಬ್ಯಾಂಕ್ ನವರು ಹಿಂಬರಹ ಕೊಟ್ಟಿರುತ್ತಾರೆ. ನಾನು ಕೆನರಾ ಬ್ಯಾಂಕ್ ಗೆ ಕೊಟ್ಟ ಅರ್ಜಿಯ ಆಧಾರದ ಮೇಲೆ ಆ ಚೆಕ್ ಗಳನ್ನು ಅವರು ತಿರಸ್ಕರಿಸಿರುತ್ತಾರೆ. ನಂತರ ನಾನು ರಾಣೇಬೆನ್ನೂರು ಶಹರ ಪೋಲಿಸ್ ಠಾಣೆಗೆ ವಿಚಾರಿಸಲು ಹೋದಾಗ ಅವರು ಈ ಬಗ್ಗೆ ಯಾವುದೇ ಆಸಕ್ತಿ ತೋರಿಸಿರುವುದಿಲ್ಲ.

ದಿಃ 17-08-2023 ರಂದು ಇಬ್ಬರು ಆರೋಪಿತರು ನನಗೆ ವಕೀಲರ ಮೂಲಕ ನೋಟಿಸ್ ಕಳುಹಿಸಿರುತ್ತಾರೆ. ಆ ನೋಟಿಸ್ ನ ಆಧಾರದ ಮೇಲೆ ನನ್ನ ಕಳೆದು ಹೋದ ಚೆಕ್ ಗಳು ಆರೋಪಿತರ ಬಳಿ ಇರಬಹುದು ಎಂದು ನಾನು ಊಹೆ ಮಾಡಿರುತ್ತೇನೆ. ನಂತರ ಹಾವೇರಿ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ಲಿಖಿತ ದೂರನ್ನು ದಾಖಲಿಸಿರುತ್ತೇನೆ. ಸದರಿ ದೂರಿನ ಪ್ರತಿಗಳನ್ನು Dy.S.P and ರಾಣೇಬೆನ್ನೂರು ಶಹರ ವೃತ್ತ ನಿರೀಕ್ಷಕರಿಗೂ ಕೋರಿಯರ್ ಮೂಲಕ ಕಳುಹಿಸಿರುತ್ತೇನೆ. ಸದರಿ ಕೊರಿಯರ್ ರಶೀದಿಗಳನ್ನು ಮತ್ತು ಸ್ವೀಕೃತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ದಿಃ 04-09-2023 ರಂದು ಆರೋಪಿತರು ಕೊಟ್ಟ ನೋಟಿಸ್ ಗೆ ನಾನು ನಮ್ಮ ವಕೀಲರ ಮೂಲಕ ಉತ್ತರವನ್ನು ಕೊಟ್ಟಿರುತ್ತೇನೆ. ದಿಃ 22-09-2024 ರಂದು ನಾನು ನನ್ನ ಕುಟುಂಬದ ನಿರ್ವಹಣೆಗೊಸ್ಕರ ರಾಣೇಬೆನ್ನೂರಿನ ಮಾರುಕಟ್ಟೆಗೆ ದಿನಸಿ ಪದಾರ್ಥಗಳನ್ನು ಮತ್ತು ತರಕಾರಿ ತರಲು ಮಾರುಕಟ್ಟೆಗೆ ಹೋದಾಗ ಆರೋಪಿತರು ಇಬ್ಬರು ಜೊತೆಗೆ ಇಬ್ಬರನ್ನು ಕರೆದು ಕೊಂಡು ಬಂದು ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ. ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ ನಾನು ರಾಣೇಬೆನ್ನೂರಿನ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ಅಲ್ಲಿ ವೈದ್ಯರು ನನಗೆ ಚಿಕಿತ್ಸೆ ಕೊಟ್ಟಿರುತ್ತಾರೆ. ವೈದ್ಯರು ಪೋಲಿಸರಿಗೆ ಪೋನ್ ಮಾಡಿ ಪೋಲಿಸರನ್ನು

ಕರೆಯಿಸಿದ್ದರು. ಪೋಲಿಸರು ನನ್ನಿಂದ ಮಾಹಿತಿ ಪಡೆದು ಕೊಂಡು ಹೋಗಿರುತ್ತಾರೆ. ಪೋಲಿಸರು ಸಿಸಿ ಟಿವಿ ಕ್ಯಾಮರಾದಲ್ಲಿ ಚೆಕ್ ಮಾಡಿ ನೋಡಿ ನನಗೆ ತಿಳಿಸುತ್ತೇವೆ ಎಂದು ಹೇಳಿದ್ದರು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವಕಾಶ ಕೋರಿರುವುದರಿಂದ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.